Reg No. B G 155 23-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ಬಯಲು ಬಂದೀಖಾನೆ ಸ್ಥಾಪನೆ

ಬೆಂಗಳೂರುನಗರದ ಗಡಿಯಲ್ಲಿ ಬಹಿರಂಗ ಬಂದೀಖಾನೆ ಸ್ಥಾಪಿಸುವ ಉದ್ದೇಶ ರಾಜ್ಯ ಸರ್ಕಾರಕ್ಕೆ ಇದೆ. ಇದಕ್ಕಾಗಿ ಕೃಷಿಗೋಸ್ಕರ 300 ರಿಂದ 400 ಎಕರೆ ಭೂ ಪ್ರದೇಶವನ್ನು ವಶಕ್ಕೆ ತೆಗೆದುಕೊಳ್ಳಲಾಗುವುದು. ಇಂಥಹ ಕಾರಾಗೃಹ ಘಟನ ಪ್ರಭಾವಶಾಲಿಯಾದ್ದು ಆದು ಯಶಸ್ವಿ ಆಗಿ ಕೆಲಸ ಮಾಡುತ್ತಿದೆ

ಪುರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ || 30 ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವದು.

ಭೂಮಿ ಇಲ್ಲದ ಬಡವರಿಗೆ

ಬೆಂಗಳೂರು— ರಾಜ್ಯದಲ್ಲಿನ ಸುಮಾರು 8 ರಿಂದ 10 ಲಕ್ಷ ಎಕ್ರೆ ಸರ್ಕಾರಿ ಭೂಮಿಯನ್ನು ಭೂಮಿಯಿಲ್ಲದ ಬಡವರಿಗೆ ವ್ಯವಸಾಯಕ್ಕಾಗಿ, ತಾಲ್ಲೂಕು ಮಟ್ಟದ ಸಮಿತಿಗಳ ಮೂಲಕ ಒಂದು ವರ್ಷದಲ್ಲಿ ಕೊಡಲಾಗುವದೆಂದು ಕಂದಾಯ ಮಂತ್ರಿ ಶ್ರೀ ಕೌಜಲ್ಗಿಯವರು ಹೇಳಿದರು.

ದೇವಸ್ಥಾನಕ್ಕೆ ಸರ್ಕಾರದ ನೆರವು

ಚಿಕ್ಕಮಗಳೂರು ದೇವನೂರು ಗ್ರಾಮದ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ಪುನರ್ನಿರ್ಮಾಣಕ್ಕಾಗಿ ಸರಕಾರ ರೂ 10000 ಮಂಜೂರ್ಮಾಡಿದೆ.

ಹೆಚ್ಚು ಸಕ್ಕರೆ

ನವದೆಹಲಿ— ಜೂನ್-ಜುಲೈಗೆ ರಾಜ್ಯ ಸರ್ಕಾರಗಳಿಗೆ 1.58 ಲಕ್ಷ ಟನ್ ಮತ್ತು ಅನಿರ್ಬಂಧ ಮಾರುಕಟ್ಟೆ ವ್ಯಾಪಾರಕ್ಕೆ 1.58 ಲಕ್ಷ ಟನ್ ಸಕ್ಕರೆಯನ್ನು ಬಿಡುಗಡೆ ಮಾಡಲು ಸರ್ಕಾರ ಆಜ್ಞೆ ಮಾಡಿದೆ.

★

ಭಾರತದಲ್ಲಿ ವರ್ಷಕ್ಕೆ ಇಪ್ಪತ್ತೊಂಬತ್ತು ಸಾವಿರ ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಗುಜರಾತ್ ಬಿಟ್ಟು ಉಳಿದೆಡೆ ಗಂಡಸರೇ ಹೆಚ್ಚು

ಫರ್ಟಿಲೈಜರು ಫ್ಯಾಕ್ಟರಿ

ಬೆಂಗಳೂರು— ರೂ 65 ಕೋಟಿ ಮಂಗಳೂರು ಫರ್ಟಿಲೈಜರು ಸ್ಯಾಜಿಕ್ಟ್ಸನಿರ್ಮಾಣ ಕಾರ್ಯವು ಮುಂದಿನ ಸೆಪ್ಟಂಬರ್‌ನಲ್ಲಿ ಪ್ರಾರಂಭಿಸಲಾಗುವದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು

ಹುಡುಗಿಯರನ್ನು ಪೀಡಿಸುವವರಿಗೆ

ಡಾಕಾ— ಹುಡುಗಿಯರನ್ನು ಪೀಡಿಸುವ ಯುವಕರಿಗೆ 14 ವರ್ಷ ಕಠಿಣ ಶಿಕ್ಷೆ ವಿಧಿಸಲಾಗುವದೆಂದು ಮಿಲಿಟರಿ ಶಾಸನಾಧಿಕಾರಿಗಳು ಎಚ್ಚರಿಕೆ ಇತ್ತಿದ್ದಾರೆ.

ಬಿಟ್ಟೀ ಭೂಮಿ

ಸೈಗೋನ್— ಕ್ರಾಂತಿಯ ಹೊಸ ಭೂ ಸುಧಾರಣೆಯಂತೆ 8 ಲಕ್ಷ ದಕ್ಷಿಣ ವಿಯಟ್ನಾಂ ಗುತ್ತಿಗೇದಾರ ರೈತರು ಆ ಭೂಮಿಗಳನ್ನು, ಭೂಮಾಲೀಕರ ಆತಂಕವಿಲ್ಲದೆ ಉಚಿತವಾಗಿ ಹೊಂದುವ ಆಜ್ಞೆ ಹೊರಡಿಸಲಾಗುವದು.

ಅತ್ಯಂತ ದೊಡ್ಡ ವರ್ಣಚಿತ್ರ

ನವದೆಹಲಿ— ವಿಶ್ವದ ಅತ್ಯಂತ ದೊಡ್ಡ ವರ್ಣಚಿತ್ರವು ಈಗ ಪಶ್ಚಿಮ ಬರ್ಲಿನ್ ಯೂರೋಪಾ ಸೆಂಟರಿನಲ್ಲಿ ಇಡಲಾಗಿದೆ — " ನರಳುತ್ತಿರುವ ಮಾನವ " ಎಂಬ ಅಭಿದಾನದ ಈ ಚಿತ್ರವು 220 ಅಡಿ ಉದ್ದ 26 ಅಡಿ ಅಗಲವಿದೆ - 42 ವರ್ಷದ ಜರ್ಮನ್ ಚಿತ್ರಗಾರ ನುತ್ತು ಕಲಾವಿದರ ಮೈಕೆಲ್ ಓಸ್ವಾಲ್ಡ್ ಬರೆದಿದ್ದು ಇದು. 2 ಟನ್ ತೂಕದ ಆಯಿಲ್ ಕ್ಲಾತ್ ಮೇಲೆ ಬರೆದಿದೆ

★

ಜರೂಸಲೇಂ ವೆಲ್ಲಿಂಗ್ಡನ್ ಗೋಡೆಯ ಹತ್ತಿರ 3 ಸಾವಿರ ಭಕ್ತರು ಪ್ರಾರ್ಥನೆ ನಡೆಸುತ್ತಿದ್ದಾಗ ಮೂರು ಡೈನಾಮೆಟ್ ಸಿಡಿದು ಒಬ್ಬ ಅರಬ್ ಸತ್ತ. ಒಬ್ಬ ಇಸ್ರೇಲಿ ಸೈನಿಕ ಗಾಯಗೊಂಡ. 20 ಜನ ಬಂಧಿತರಾದರು.

ಅತ್ಯಂತ ಎತ್ತರದಲ್ಲಿನ ಹೋಟಲು

ಟೋಕಿಯೋ— ಎವರೆಸ್ಟ್ ಶಿಖರದ ಮೇಲೆ ವಿಶ್ವದ ಅತ್ಯಂತ ಎತ್ತರದಲ್ಲಿನ ಹೋಟಲನ್ನು ಜಪಾನ್ ಮತ್ತು ನೇಪಾಳ ಕಟ್ಟಲಿವೆ ; ಕಲ್ಲಿನಿಂದ ಕಟ್ಟಲ್ಪಡುವ ಈ ಕಟ್ಟಡದಲ್ಲಿ 24 ಅತಿಥಿಗಳಿರಲು ಅವಕಾಶ ವಿರುವುದು ; ಕಟ್ಟಡ ಕಟ್ಟುವ ಕಾರ್ಯ ಮುಂದಿನ ಅಕ್ಟೋಬರಿನಿಂದ ಪ್ರಾರಂಭಿಸಲಾಗುವದು : ಅಲ್ಲಿ ಪ್ರತಿ ಅತಿಥಿಗೆ ದಿನಕ್ಕೆ ರೂ 225 ಭಾರ್ಜುನೂಡಲಾಗುವದು : ಹೋಟಲು ಹತ್ತಿರ ವಿಮಾನ ನಿಲ್ದಾಣ ವಿದ್ದು ಖಟ್ಮಂಡುವಿನಿಂದ ಅಲ್ಲಿಗೆ ಆತಿಥಿಗಳನ್ನು ಸಾಗಿಸಲಾಗುವದು.

ಅಕ್ಕಿ ಸಂಗ್ರಹ

ಭಾರತದ ಆಹಾರ ಕಾರ್ಪೊರೇಷ್ ಈ ವರ್ಷ 22 ಲಕ್ಷ ಟನ್ನುಗಳಷ್ಟು ಅಕ್ಕಿ ಶೇಖರಣೆ ಮಾಡಿದೆ ಅಂದರೆ ಶೇಕಡ 90 ರಷ್ಟು ಸಂಗ್ರಹಣೆ ಮಾಡಿದಂತೆ ಆಗಿದೆ. ಜುಲೈ ಕಡೆಯಲ್ಲಿ ಗೋಧಿ ಸಂಗ್ರಹಣೆ ಸಂಪೂರ್ಣ ಆಗುವುದು 28 ಲಕ್ಷ ಟನ್‌ಗಳ ಪೈಕಿ 20 ಲಕ್ಷ ಟನ್‌ಗಳು ಸಂಗ್ರಹ ಆಗಿದೆ

ನಿಶೇಧ ಜಾರಿ

ಕಂಪನಿಗಳು ರಾಜಕೀಯ ಪಕ್ಷಗಳಿಗೆ, ರಾಜಕೀಯ ಉದ್ದೇಶದಿಂದ ವ್ಯಕ್ತಿಗಳಿಗೆ ಹಣ ಕೊಡುವುದನ್ನು ನಿನ್ನೆಯಿಂದ ನಿಶೇಧ ಮಾಡಿ ಆಜ್ಞೆಯನ್ನು ಜಾರಿಗೆ ಕೊಡಲಾಗಿದೆ ಈ ಆಜ್ಞೆ ಭಂಗ ಮಾಡಿದರೆ ರೂ. 5 ಸಾವಿರ ದಂಡ ವಿಧಿಸಲಾಗುವುದು

●

ಜನಸಂಘದ ಅಧ್ಯಕ್ಷ ಜೋಲಿ ಆದ ದೀನ ದಯಾಳು ಉಪಾಧ್ಯಾಯರ ಕೊಲೆ ಸಂಬಂಧಿಸಿದಂತೆ ವಿಚಾರಣಾ ಮಂಡಲಿಯೊಂದರ ರಚನೆ ಮಾಡಲು ಸರ್ಕಾರಕ್ಕೆ ಒತ್ತಾಯ ಹಾಕಲು ಪಾರ್ಲಿಮೆಂಟಿನ 72 ಸದಸ್ಯರು ನಿರ್ಧರಿಸಿರುವರು

ಮೈಸೂರು ಬಗ್ಗೆ ಮೆಚ್ಚಿಕೆ

ಮೈಸೂರು ಪುರಸಭೆಯಲ್ಲಿ ಮೊನ್ನೆ ನಡೆದ ಸತ್ಕಾರ ಕೂಟದಲ್ಲಿ ಆಂಧ್ರದ ಶ್ರೀ ಚೆಂಚು ರಾಮನಾಯ್ಡುರವರು ಭಾಷಣ ಮಾಡುತ್ತಾ, ಮೈಸೂರು ರಾಜ್ಯದಲ್ಲಿ ವಸತಿಯ ನಿರ್ಮಾಣದ ಬಗ್ಗೆ ಮೆಚ್ಚಿಕೆ ಸೂಚಿಸಿದರು ರಾಜ್ಯದ ಗೃಹ ನಿರ್ಮಾಣ ಸಂಸ್ಥೆ ಅಧ್ಯಕ್ಷ ಡಾ|| ತಿಮ್ಮೇಗೌಡರು ಭಾಷಣ ಮಾಡುತ್ತಾ, ಗೃಹ ನಿರ್ಮಾಣಕ್ಕೆ ವಸತಿ ಸಂಸ್ಥೆ ಶೇಕಡ 80 ಸಾಲ ನೀಡುವುದೆಂದು ಮಿಕ್ಕಿದ್ದನ್ನು ಪೌರಸಭೆ ಕೊಡಬೇಕೆಂದು ತಿಳಿಸಿದರು ಪುರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರು ಸ್ವಾಗತಿಸಿದರು

ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ, ಮೈಸೂರು.

ಜನರಲ್ ಮೇನೇಜರ್‌ರವರ ಕಛೇರಿ,
ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ,
ಮೈಸೂರು-4

ನಂ. ಪಿ. 77 ತಾ|| 13-6-1969

ವಿಷಯ: ತಾ|| 1-2-1969 ರಿಂದ 31-5-1969 ಕ್ಕೆ ಅಂತ್ಯವಾಗುವ ನಾಲ್ಕು ತಿಂಗಳಲ್ಲಿ ಮೈಸೂರಿನಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಶೇಖರವಾಗಿರುವ ಬಾಯಲರ್ ಕೆಟ್ಟ ಮತ್ತು ಬೂದಿಯನ್ನು ತಾ|| 14-7-69 ನೇ ಸೋಮವಾರ ಬೆಳಿಗ್ಗೆ 10 ಘಂಟೆಗೆ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ ಆವರಣದಲ್ಲಿ ಮರು ಹರಾಜು ಮೂಲಕ ಇಷ್ಟ ಪಡುವ ಹರಾಜು ಸವಾಲ್ ದಾರರಿಗೆಲ್ಲಾ ತಿಳಿಯಪಡಿಸುವುದೇನೆಂದರೆ :— ಮೇಲ್ಕಂಡುತೆ ನಾಲ್ಕು ತಿಂಗಳ ಅವಧಿಯಲ್ಲಿ ಶೇಖರವಾಗಿರುವ ಬಾಯಲರ್ ಕೆಟ್ಟ ಮತ್ತು ಬೂದಿಯ ಮರುಹರಾಜನ್ನು ತಾ|| 15-6-1969 ಮತ್ತು 22-6-1969ರ ಮೈಸೂರು ಗೆಜೆಟ್‌ನಲ್ಲಿ ಪ್ರಕಟವಾಗಿರುವ ಷರತ್ತು ಮತ್ತು ನಿಯಮಗಳಿಗನುಸಾರವಾಗಿ ನಡೆಸಲಾಗುತ್ತೆ. ಈ ಆಫೀಸಿನಿಂದ ತಾ|| 6-6-1969 ರಲ್ಲಿ ಇದೇ ನಂಬರ್‌ನಲ್ಲಿ ಪ್ರಕಟಿಸಿರುವ ಸಂಕ್ಷಿಪ್ತ ಟೆಂಡರ್ ಪ್ರಕಟಣೆಗೆ ಇದು ಸಂಬಂಧಪಟ್ಟಿರುತ್ತೆ. **ಜನರಲ್ ಮ್ಯಾನೇಜರ್**

ಪುರುಷಸೂಕ್ತ

ಸಂಗ್ರಾಹಕರು :
ಆ. ನ. ಅಯ್ಯಂಗಾರ್

[ಮುಂದುವರಿದುದು]

ಆ ಕಾಲದಲ್ಲಿ ಬ್ರಹ್ಮನೆಂಬ ಹವಿಸ್ಸನ್ನು ಪ್ರಕೃತಿಯಲ್ಲಿ ಇರಿಸಿ, ಪ್ರೋಕ್ಷಣ ನೆಂಬ ಸಂಸ್ಕಾರವನ್ನು ಮಾಡಿದರು. (ಪಶ್ಚಾದಿಗಳ ಸೃಷ್ಟಿಗಿಂತಲೂ ಮೊದಲು ಈ ಯಜ್ಞವು ನಡೆಯಲ್ಪಡ್ಡರಿಂದ ಈ ಯಜ್ಞದಲ್ಲಿ ಸರ್ವವೂ ಮಾನಸಿಕವಾಗಿ ನಡೆಯಿತ್ತೆಂದು ತಿಳಿಯಬೇಕು). ಆ ಬ್ರಹ್ಮರೂಪವಾದ ಹವಿಸ್ಸಿನಿಂದ ಇಂದ್ರಿಯಗಳು ಯಾಗ ಮಾಡಿದವು.

ಈ ರೀತಿಯಾಗಿ ಚತುರ್ಮುಖಬ್ರಹ್ಮನು ಸರ್ವಶಬ್ದವಾಚ್ಯನಾದ ಭಗವಂತನನ್ನು ಉದ್ದೇಶಿಸಿ ಆತ್ಮಸಮರ್ಪಣರೂಪಯಾಗವನ್ನು ಅನುಷ್ಠಿಸಿದನು. ಆಗ ಸೃಷ್ಟಿಸಲ್ಪಡುವ ವಸ್ತುಗಳ ಉತ್ಪತ್ತಿಗೆ ಕಾರಣಭೂತವಾದ ಶುಕ್ಲನೀಲಾದಿ ವಿಚಿತ್ರ ವರ್ಣಗಳುಳ್ಳ ವಸ್ತುವು ಉತ್ಪನ್ನವಾಯಿತು. ಅನಂತರ ಚತುರ್ಮುಖನು ವಾಯುಮಾರ್ಗ ಸಂಚರಣಶೀಲರಾದ ಪಕ್ಷಿಗಳ ರೂಪಗಳಾದ ಪಶುಗಳನ್ನೂ, ಅರಣ್ಯದಲ್ಲಿರುವ ಮತ್ತು ಗ್ರಾಮಗಳಲ್ಲಿರುವ ಪಶುಗಳನ್ನೂ ಸೃಷ್ಟಿಸಿದನು.

ನಂತರ ಸರ್ವಯಜ್ಞಫಲಭೂತವಾದ ಪರಮಪುರುಷನಿಂದ ಋಗ್ವೇದಗಳು, ಸಾಮವೇದಗಳು, ಗಾಯತ್ರ್ಯಾದಿ ಛಂದಸ್ಸುಗಳೂ, ಯಜುರ್ವೇದವೂ ಉತ್ಪನ್ನವಾದವು.

ನಂತರ ಆ ಬ್ರಹ್ಮನಿಂದ ಕುದುರೆಗಳು, ವಾನರಗಳು, ಕತ್ತೆಗಳು, ಗೋವುಗಳು, ಆಡುಗಳು, ಕುರಿಗಳು ಉತ್ಪನ್ನಗಳಾದವು. (ಋಗ್ವೇದವೂ ಗಾಯತ್ರಿಯೂ ಬ್ರಹ್ಮನ ಪೂರ್ವಮುಖದಿಂದಲೂ, ಸಾಮವೇದವು ಪಶ್ಚಿಮ ಮುಖದಿಂದಲೂ, ಯಜುರ್ವೇದವು ದಕ್ಷಿಣ ಮುಖದಿಂದಲೂ, ಅಥರ್ವಣವೇದವು ಉತ್ತರ ಮುಖದಿಂದಲೂ ಉತ್ಪನ್ನವಾದುವು. ಅಶ್ವರಾಸಭಾದಿಗಳು ಪಾದಗಳಿಂದಲೂ, ಗೋವುಗಳು ಉದರದಿಂದಲೂ, ಆಡುಗಳು ಮುಖದಿಂದಲೂ, ಕುರಿಗಳು ವಕ್ಷಸ್ಥಳಗಳಿಂದಲೂ ಉತ್ಪನ್ನಗಳಾದವು).

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 5 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದು ನಿ ಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಅಪೆರಾ— 22-6-69 ರಿಂದ

.... ಮನಮೋಹಕ ತಮಿಳು ಚಿತ್ರ ....

ಮ ಹಾ ದೇ ವಿ

ಹೊಸ ಕಾಪಿ

ಪಾತ್ರ — ಎಂ ಜಿ ರಾಮಚಂದ್ರ ಸಾವಿತ್ರಿ
ವೀರಪ್ಪ ಚಂದ್ರಬಾಬು
ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow), Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4.